ನಿಸ್ಪೃಹದನಿ

# ಬಿನ್ನಹಕೆ ಉಸಿರಿಲ್ಲವಯ್ಯ...

ಪ್ರಜೆಗಳ ಸಾವು ಪ್ರಜಾಪ್ರತಿನಿಧಿಗಳಲ್ಲಿ ಪಾಪಪ್ರಜ್ಞೆ ಹುಟ್ಟಿಸಬೇಕಾಗಿತ್ತು. ಆದರೆ, ಆ ಹಂತವನ್ನು ನಮ್ಮ ರಾಜಕಾರಣಿಗಳು ದಾಟಿ ಬಹುಮುಂದೆ ಹೋಗಿರುವಂತಿದೆ. ಸಾವಿಗಾಗಿ ಮರುಗುವುದಿರಲಿ, ಕಣ್ಣೆದುರು ಸಂಭವಿಸುತ್ತಿರುವ ಸಾವುಗಳ ಸಂಖ್ಯೆಯನ್ನು ಒಪ್ಪಿಕೊಳ್ಳುವ ವಿನಯವೂ ಅವರಿಗಿಲ್ಲ.

‘ಬಿನ್ನಹಕೆ ಬಾಯಿಲ್ಲವಯ್ಯ, ಅನಂತ ಅಪರಾಧ ಎನ್ನಲ್ಲಿ ಇರಲಾಗಿ’ ಎನ್ನುವುದು ಪುರಂದರದಾಸರ ಜನಪ್ರಿಯ ಕೀರ್ತನೆ. ಸದ್ಯದ ನಮ್ಮ ಅಸಹಾಯಕತೆ ಮತ್ತೂ ದಾರುಣವಾದುದು. ಅನಂತ ಅಪರಾಧಗಳನ್ನು ಮಾಡಿರುವ ಕಾರಣಕ್ಕಾಗಿ ನಾನು ನಿನ್ನಲ್ಲಿ ಪ್ರಾರ್ಥನೆ ಮಾಡುವ ಹಕ್ಕನ್ನು ಕಳೆದುಕೊಂಡಿದ್ದೇನೆ ಎನ್ನುವುದು ಪುರಂದರದಾಸರ ಅಳಲು. ಅವರು ಮಾಡಿರುವ ಅಪರಾಧಗಳ ಪಟ್ಟಿಯಲ್ಲಿ, ಶಿಶುಮೋಹ, ಸತಿಮೋಹ, ಜನನಿ ಜನಕರ ಮೋಹ, ರಾಜಮೋಹ, ಪಶುಮೋಹ, ಭೂಮೋಹಗಳೆಲ್ಲ ಬಂದು ಹೋಗುತ್ತವೆ. ಈ ಮೋಹಗಳಲ್ಲಿ ಸಿಲುಕಿ ನಿನ್ನನ್ನು ಮರೆತ ನನಗೆ ‘ಬಿನ್ನಹಕೆ ಬಾಯಿಲ್ಲ’ ಎಂದು ದಾಸರು ಹೇಳುತ್ತಾರೆ. ದಾಸರು ಹೇಳುವ ತಪ್ಪುಗಳ ಪಟ್ಟಿ ಅಧ್ಯಾತ್ಮದ ಸಾಧನೆಯ ಮಾರ್ಗದಲ್ಲಿ ಇರುವವರಿಗೆ ಅನ್ವಯಿಸಬಹುದೇನೊ? ಲೌಕಿಕದಲ್ಲಿ ಮುಳುಗಿರುವ ನಮಗೆ ಅವುಗಳೆಲ್ಲ ಅನಿವಾರ್ಯ ಅಗತ್ಯಗಳೇ ಹೊರತು, ಪಾಪವೇನೂ ಅಲ್ಲ. ಆದರೂ ನಾವು ಬಿನ್ನಹದ ಬಾಯಿಯನ್ನು ಕಳೆದುಕೊಂಡಿದ್ದೇವೆ? ಅಥವಾ ನಮ್ಮ ಬಿನ್ನಹವನ್ನು ಕೇಳಿಸಿಕೊಳ್ಳುವ ತುದಿಯೇ ಇಲ್ಲದ ಸ್ಥಿತಿ ತಲುಪಿದ್ದೇವೆ.

ದಾಸರ ಕೀರ್ತನೆಯ ಭಕ್ತ–ಭಗವಂತನ ಸಂಬಂಧವನ್ನು ಪ್ರಜಾಪ್ರಭುತ್ವ ಸಂದರ್ಭದಲ್ಲಿ ಪ್ರಜೆ ಮತ್ತು ಪ್ರಜಾಪ್ರತಿನಿಧಿಯಲ್ಲಿ ಕಲ್ಪಿಸಿಕೊಂಡರೆ, ‘ಬಿನ್ನಹಕ್ಕೆ ಬಾಯಿಲ್ಲವಯ್ಯ’ ಎನ್ನುವ ಮಾತು ಹೊಸದೇ ಅರ್ಥವನ್ನು ಪಡೆದುಕೊಳ್ಳುತ್ತದೆ. ಪ್ರಸಕ್ತ ವ್ಯವಸ್ಥೆಯಲ್ಲಿ ನಾವು ನಮ್ಮ ಅಳಲನ್ನು ಹೇಳಿಕೊಳ್ಳಬೇಕಾದುದು ಪ್ರಜಾಪ್ರತಿನಿಧಿಗಳಲ್ಲಿ. ಪ್ರಜೆಗಳ ತವಕತಲ್ಲಣಗಳಿಗೆ ಸ್ಪಂದಿಸುವುದು ಹಾಗೂ ಪ್ರಜಾಹಿತಕ್ಕಾಗಿ ಅವಿರತವಾಗಿ ದುಡಿಯುವುದು ಪ್ರಜಾಪ್ರತಿನಿಧಿಗಳ ಕರ್ತವ್ಯ. ಆದರೆ, ಆಗುತ್ತಿರುವುದೇನು? ಅಧಿಕಾರ ಎನ್ನುವುದು ಸೇವೆಯ ಮಾರ್ಗ ಆಗುವುದರ ಬದಲು, ಸ್ವಹಿತಸಾಧನೆಗೆ ಒದಗಿಬಂದಿರುವ ಮಂತ್ರದಂಡವಾಗಿದೆ. ಪ್ರಜಾಹಿತ ಹಿನ್ನೆಲೆಗೆ ಸರಿದು ಸ್ವಹಿತವೇ ಮುಖ್ಯವಾಗಿದೆ.


ಕೊರೊನಾ ಸಂದರ್ಭ ನಮ್ಮ ಅನೇಕ ರಾಜಕಾರಣಿಗಳ ಭಂಡತನ, ಸಾವಿನಮನೆಯಲ್ಲೂ ಗಳ ಹಿರಿಯುವ ಮನೋಭಾವ, ಭ್ರಷ್ಟತೆಯನ್ನು ಜಗಜ್ಜಾಹೀರುಗೊಳಿಸಿದೆ. ವೈದ್ಯಕೀಯ ಸವಲತ್ತು ದೊರೆಯದೆ ಜನ ಮನೆಗಳಲ್ಲಿ, ರಸ್ತೆಗಳಲ್ಲಿ ಸಾಯುತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಆಮ್ಲಜನಕದ ಕೊರತೆಯಿಂದ ಒದ್ದಾಡಿ ಸಾಯುತ್ತಿದ್ದಾರೆ. ಘನತೆಯಿಂದ ಅಂತ್ಯಸಂಸ್ಕಾರ ನಡೆಸುವುದೂ ಅಸಾಧ್ಯ ಎನ್ನುವಂತಹ ಸನ್ನಿವೇಶ ಸೃಷ್ಟಿಯಾಗಿದೆ. ಪರಿಸ್ಥಿತಿ ಇಷ್ಟು ದಾರುಣವಾಗಿದ್ದರೂ, ಬಹಳಷ್ಟು ರಾಜಕಾರಣಿಗಳು ದಂತಗೋಪುರಗಳಿಂದ ಇಳಿದುಬಂದಿಲ್ಲ. ಪರಸ್ಪರ ಉಗುಳು ಎರಚಿಕೊಳ್ಳುವುದನ್ನು ಬಿಟ್ಟಿಲ್ಲ. ಸಂಕಷ್ಟದ ಸಮಯದಲ್ಲೂ ಧಾರ್ಮಿಕ ಅಸಹನೆಯ ರಾಜಕಾರಣದಿಂದ ದೂರ ಉಳಿದಿಲ್ಲ. ನಾಡಿನ ಹಿತಕ್ಕಿಂತ ಪಕ್ಷನಿಷ್ಠೆಯೇ ಮುಖ್ಯವಾಗಿರುವ ಪ್ರಜಾ ಪ್ರತಿನಿಧಿಗಳು ನಮ್ಮನ್ನು ಪ್ರತಿನಿಧಿಸುತ್ತಿದ್ದಾರೆ. ಇವೆಲ್ಲ ಕಾರಣಗಳಿಗಾಗಿ ಜನಸಾಮಾನ್ಯರರಿಗೆ ತಾವು ತಬ್ಬಲಿಗಳು ಅನ್ನಿಸಿದರೆ ಆಶ್ಚರ್ಯವೇನೂ ಇಲ್ಲ.

ಪ್ರಜೆಗಳ ಸಾವು ಪ್ರಜಾಪ್ರತಿನಿಧಿಗಳಲ್ಲಿ ಪಾಪಪ್ರಜ್ಞೆ ಹುಟ್ಟಿಸಬೇಕಾಗಿತ್ತು. ಆದರೆ, ಆ ಹಂತವನ್ನು ನಮ್ಮ ರಾಜಕಾರಣಿಗಳು ದಾಟಿ ಬಹುಮುಂದೆ ಹೋಗಿರುವಂತಿದೆ. ಸಾವಿಗಾಗಿ ಮರುಗುವುದಿರಲಿ, ಕಣ್ಣೆದುರು ಸಂಭವಿಸುತ್ತಿರುವ ಸಾವುಗಳ ಸಂಖ್ಯೆಯನ್ನು ಒಪ್ಪಿಕೊಳ್ಳುವ ವಿನಯವೂ ಅವರಿಗಿಲ್ಲ. ಸಾವುನೋವುಗಳಿಗಾಗಿ ಜನರ ನಿರ್ಲಕ್ಷ್ಯವನ್ನೇ ಹೊಣೆ ಮಾಡುತ್ತಿರುವ ಪ್ರಭೃತಿಗಳೂ ನಮ್ಮನ್ನು ಪ್ರತಿನಿಧಿಸುತ್ತಿದ್ದಾರೆ. ಸಾವಿಗೆ ಮರುಗದ ಪಾಷಾಣಹೃದಯಗಳಿಗೆ ಬದುಕಿರುವವರ ಪ್ರಾರ್ಥನೆ ಕೇಳಿಸುವುದು ಹೇಗೆ? ಹೃದಯವನ್ನು ಕಲ್ಲಾಗಿಸಿಕೊಂಡವರ ಕಿವಿ ಚರ್ಮದ್ದಾಗಿರಲು ಸಾಧ್ಯವೆ? ಜನಸಾಮಾನ್ಯರ ಇಂದಿನ ಸ್ಥಿತಿ, ‘ಬಿನ್ನಹಕೆ ಬಾಯಿಲ್ಲವಯ್ಯ’ ಎನ್ನುವ ಹಂತವನ್ನು ದಾಟಿ, ‘ಬಿನ್ನಹಕೆ ಉಸಿರಿಲ್ಲವಯ್ಯ’ ಎನ್ನುವಂತಾಗಿದೆ.

ಪುರಂದರದಾಸರು ತಮ್ಮ ಅಪರಾಧಗಳ ಪಟ್ಟಿಯಲ್ಲಿ, ಅನ್ನಮದ, ಅರ್ಥಮದ, ಅಖಿಲ ವೈಭವದ ಮದಗಳನ್ನೂ ಹೆಸರಿಸುತ್ತಾರೆ. ‘ಇಷ್ಟು ದೊರಕಿದರೆ ಮತ್ತಿಷ್ಟು ಬೇಕೆಂಬಾಸೆ, ಅಷ್ಟು ದೊರಕಿದೆ ಮತ್ತಿಷ್ಟರಾಸೆ’ ಎಂಬ ದುರಾಸೆಯನ್ನೂ ದುರಂತದ ಕಾರಣವೊಂದಾಗಿ ಗುರ್ತಿಸುತ್ತಾರೆ. ಇವೆಲ್ಲವೂ ಈಗಲೂ ಇವೆ. ಆದರೆ, ಈ ಮದಗಳನ್ನು ಪ್ರಸ್ತುತ ನಾವು ನೋಡುತ್ತಿರುವುದು ಪ್ರಜಾ ಪ್ರತಿನಿಧಿಗಳಲ್ಲಿ. ಅಖಿಲ ವೈಭವದ ಮದ ಎನ್ನುವುದು ಅಧಿಕಾರ ಮದದ ಇನ್ನೊಂದು ರೂಪವಷ್ಟೇ. ಅಧಿಕಾರ ಮದದಲ್ಲಿ ಮೈಮರೆತವರಿಗೆ ಜನಸಾಮಾನ್ಯರ ಸಂಕಟಗಳು ಕೂಡ ಲಾಭದ ಬಾಬತ್ತಾಗಿಬಿಡುತ್ತವೆ. ಕೊರೊನಾ ಸಂದರ್ಭದ ಭ್ರಷ್ಟಾಚಾರ, ಕಾಳಸಂತೆಯಲ್ಲಿ ಔಷಧ ಮಾರಾಟವಾಗುತ್ತಿರುವುದನ್ನು ನೋಡಿದರೆ, ಲಾಭಕೋರ ಮನಸ್ಸುಗಳಿಗೆ ಸೂತಕದ ಮನೆಗಳೆಲ್ಲ ಮದುವೆಮನೆಗಳಂತೆ ಕಾಣಿಸುತ್ತಿದ್ದರೆ ಆಶ್ಚರ್ಯವಿಲ್ಲ.

ಕೊರೊನಾ ದವಡೆಗೆ ಸಿಲುಕಿಬಂದ ಪ್ರಜಾ ಪ್ರತಿನಿಧಿಗಳೂ ಅಧಿಕಾರದ ಕ್ಷಣಿಕತೆಯನ್ನು ಅರ್ಥ ಮಾಡಿಕೊಂಡಂತಿಲ್ಲ. ಮನುಷ್ಯನ ಎದೆಯಲ್ಲಿ ಮಾನವೀಯತೆಯನ್ನು ಚಿಗುರಿಸಲು ಕೊರೊನಾಕ್ಕೇ ಸಾಧ್ಯವಾಗಿಲ್ಲ ಎಂದರೆ, ಸದ್ಯಕ್ಕದು ಇಳಿಯುವ ಮದದಂತೆ ಕಾಣಿಸುತ್ತಿಲ್ಲ. ರಾಜಕಾರಣಿಗಳು ಬದಲಾಗಬೇಕಾದುದು ಈ ಕಾಲದ ಅಗತ್ಯ. ಅದಕ್ಕಿಂತಲೂ ಮಿಗಿಲಾದುದು ನಮ್ಮ ರಾಜಕೀಯ ಚಿಂತನೆಗಳಲ್ಲಿ ಆಗಬೇಕಾಗಿರುವ ಬದಲಾವಣೆ. ಆ ಬದಲಾವಣೆಯನ್ನು ಜನಗಳೇ ತರಬೇಕು.

■ **ರಘುನಾಥ ಚ.ಹ.**



ಈಶ್ವರ್